**CC 2986/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**<u>ಸಿಸಿ ನಂಬರ್ 2986/2022</u>**

**ಸಿ ಡಬ್ಲೂ -6**
**ಪಿ ಡಬ್ಲೂ -6**

**ಸಾಕ್ಷಿಯ ಹೆಸರು - ಜಾಫರ್ ಶರೀಫ್**
**ತಂದೆಯ ಹೆಸರು - ಅಕ್ಬರ್ ಶರೀಫ್**
**ವಯಸ್ಸು - 38 ವರ್ಷಗಳು**
**ಉದ್ಯೋಗ - ಖಾಸಗಿ ಕೆಲಸ**
**ವಾಸಸ್ಥಳ - ಚೆನ್ನೈ**

**<u>ಸಾಕ್ಷಿ ಹಿಂದಿ ಬಾಷಿಗರಿದ್ದು, ಪಿಠಾಸೀನಾಧಿಕಾರಿಗೆ ಹಿಂದಿ ಬಾಷೆ ಬರುವುದರಿಂದ , ಸಾಕ್ಷ್ಯವನ್ನು ಕನ್ನಡಕ್ಕೆ ಅನುವಾದಿಸಿ ಪಡೆಯಲಾಯಿತು.</u>**

**<u>ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಪ್ರಾಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ</u>**

ದಿಃ **20-04-2022** ರಂದು ಹೊಸಪೇಟೆಯ ರಾಣಿಪೇಟೆಯಲ್ಲಿರುವ ಆಶಾಪುರ ಮೊಬೈಲ್ ಅಂಗಡಿಯಲ್ಲಿ ಇ.ಆರ್.ಡಿ ಕಂಪನಿಯ ನಕಲಿ ಉತ್ಪನ್ನಗಳು ಮಾರಾಟ ಆಗುತ್ತಿದೆ ಎಂದು ಮಾಹಿತಿ ಬಂದಿತ್ತು. ಮರುದಿನ ಅಂದರೆ ದಿಃ **21-04-2022** ರಂದು ಬೆಳಿಗ್ಗೆ **11.30** ಗಂಟೆಗೆ ಚಾಸಾ **-1, 4, 5** ಮತ್ತು ನಾನು ಪೋಲಿಸರೊಂದಿಗೆ ಸದರಿ ಅಂಗಡಿಗೆ ಹೋಗಿರುತ್ತೇವೆ. ಸದರಿ ಅಂಗಡಿಯಲ್ಲಿ ಮನ್‌ವೀರ್ ಸಿಂಗ್, ಕುಲ್ ದೀಪ್ ಸಿಂಗ್ ಎಂಬ ಹುಡುಗರು ಕೆಲಸ ಮಾಡುತ್ತಿದ್ದರು. ಸದರಿ ಅಂಗಡಿಯಲ್ಲಿ ಪರೀಶಿಲನೆ ಮಾಡಿದಾಗ **13** ಬಾಕ್ಸ್ ಗಳಲ್ಲಿ ಇ.ಆರ್.ಡಿ ಕಂಪನಿಯ ನಕಲಿ ಕೇಬಲ್ ಗಳು ಮತ್ತು ಚಾರ್ಜರ್ ಗಳು ದೊರೆತವು. ಸದರಿ **13** ಬಾಕ್ಸಗಳು **4** ಮಾಡಲ್‌ಗಳಿಗೆ ಸಬಂಧಸಿ ಇದ್ದವು. ಸದರಿ ಬಾಕ್ಸಗಳನ್ನು ಪೋಲಿಸರು ಜಪ್ತು ಪಡಿಸಿಕೊಂಡು ಠಾಣೆಗೆ ತಂದಿರುತ್ತಾರೆ. ಸದರಿ ಅಂಗಡಿಯ ಮಾಲೀಕ ಮನೋಹರ್ ಸಿಂಗ್ ತಂದೆ ರಾಮ್ ಸಿಂಗ್ ಎಂಬುವವರು ಇದ್ದರು. ಚಾಸಾ **-4** ರವರು ಸ್ಥಳದಲ್ಲಿಯೇ

ಇ.ಆರ್.ಡಿ ಕಂಪನಿಯ ಅಸಲಿ ಉತ್ಪನ್ನದೊಂದಿಗೆ ಆರೋಪಿಯ ಅಂಗಡಿಯಲ್ಲಿದ ಉತ್ಪನ್ನಗಳನ್ನು ತಾಳೆ ಮಾಡಿ ನೋಡಿ ಅವು ನಕಲಿ ಇದ್ದವು ಎಂದು ತಿಳಿಸಿದರು. ಆರೋಪಿ ಎಲ್ಲಿಂದ ಸದರಿ ಉತ್ಪನ್ನಗಳನ್ನು ತಂದಿರುತ್ತಾನೆ ಎಂದು ನನಗೆ ಗೊತ್ತಿಲ್ಲ.

ಈಗ ನಾನು ನೋಡುತ್ತಿರುವ ಪಂಚನಾಮೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಮತ್ತು ಜಪುತ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿದ್ದು, ನಿಪಿಃ **2** ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **2(ಇ)** ಎಂದು ಗುರುತಿಸಲಾಯಿತು. ಸದರಿ ಸಹಿಯನುನ್ನು ಆರೋಪಿಯ ಅಂಗಡಿಯಲ್ಲಿ ಉತ್ಪನ್ನಗಳನ್ನು ಜಪ್ತು ಮಾಡಿಕೊಂಡಾಗ ಮಾಡಿರುತ್ತೇನೆ. ಸಾಕ್ಷಿ ನಿಪಿಃ **3** ರ ಪೋಟೋಗಳನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆ ಆದಾಗ ಪೋಲಿಸರು ಚಾಸಾ **-1, 4, 5** ಮತ್ತು ಪಂಚರು ಹಾಜರಿದ್ದರು. ಪಂಚನಾಮೆಯನ್ನು ಮಾಡಿ ಸದರಿ ಬಾಕ್ಸಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿದ್ದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ಆರೋಪಿತರು ಸದರಿ ಉತ್ಪನ್ನಗಳನ್ನು ಅನಂತಪುರದ ಕಮಲ್‌ದೇವ್ ಟೆಲಿಕಾಂ ಹೋಲ್ ಸೇಲ್ ಶಾಪ್ ನ ಮೂಲ್ ಸಿಂಗ್ ತಂದೆ ಲಕ್ ಸಿಂಗ್ ಮತ್ತು ಗಣಪತ್ ಸಿಂಗ್ ತಂದೆ ದುರ್ಗಾ ಸಿಂಗ್ ರವರಿಂದ ಖರೀದಿಸಿರುವುದಾಗಿ ತಿಳಿಸಿದ್ದರು ಅಂದರೆ ಸರಿ. ಸದರಿ ಆರೋಪಿತರೊಂದಿಗೆ ನ್ಯಾಯಾಲಯದ ಮುಂದೆ ಇರುವ ಆರೋಪಿ ಇ.ಆರ್.ಡಿ ಕಂಪನಿಯ ನಕಲಿ ಉತ್ಪನ್ನಗಳನ್ನು ಮಾರಾಟ ಮಾಡಿ

ಇ.ಆರ್.ಡಿ ಕಂಪನಿಯವರಿಗೆ ಮೋಸ ಮಾಡಿರುತ್ತಾರೆ ಅಂದರೆ ಸರಿ. ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ ಅಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಎಸ್ ಎಚ್ ವಕೀಲರಿಂದಃ**

ನಾನು ತನಿಖಾಧಿಕಾರಿ ಎಂದು ಕೆಲಸ ಮಾಡಲು ಅರ್ಹತೆ ಪಡೆದಿರುತ್ತೇನೆ ಎಂದು ತೋರಿಸಲು ಪೋಲಿಸರಿಗೆ ದಾಖಲೆ ನೀಡಿರುತ್ತೇನೆ. ಚಾಸಾ -1 ರವರು ದೂರು ನೀಡಿದ್ದರು.

ಹೊಸಪೇಟೆಯಲ್ಲಿ ನಕಲಿ ಉತ್ಪನ್ನಗಳ ಮಾರಾಟ ಆಗುತ್ತಿದೆ ಎಂದು ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆ ದಿನ ನಾವು ಹೊಸಪೇಟೆಯಲ್ಲಿ 7-8 ಅಂಗಡಿಗಳಲ್ಲಿ ಸರ್ವೆ ಮಾಡಿರುತ್ತೇವೆ. 7-8 ಅಂಗಡಿಗಳ ಹೆಸರುಗಳನ್ನು ನನ್ನ ಹೇಳಿಕೆಯಲ್ಲಿ ಬರೆಸಿಲ್ಲ. ಅಂಗಡಿ ಮಾಲೀಕರಿಗೆ ನಾವುಗಳು ಉತ್ಪನ್ನಗಳನ್ನು ಪರೀಶೀಲಿಸುತ್ತೇವೆ ಎಂದು ಮತ್ತು ಸದರಿ ಪರಿಶೀಲನೆಗೆ ಅವಕಾಶ ಮಾಡಿಕೊಡಿ ಎಂದು ನೋಟಿಸ್ ನೀಡಿರಲಿಲ್ಲ. ಪಂಚರನ್ನು ಪೋಲಿಸರೆ ಕರೆದುಕೊಂಡು ಬಂದಿರುತ್ತಾರೆ, ಅವರು ಎಲ್ಲಿಂದ ಬಂದರು ಎಂದು ನನಗೆ ಗೊತ್ತಿಲ್ಲ. ಅಂಗಡಿಯಲ್ಲಿ ಬಿಲ್‌ಗಳನ್ನು ಚೆಕ್ ಮಾಡಿರುತ್ತೇವೆ. ಸದರಿ ಬಿಲ್‌ಗಳನ್ನು ಪೋಲಿಸರು ವಶಪಡಿಸಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಉತ್ಪನ್ನಗಳು ಅಸಲಿಯೋ ನಕಲಿಯೋ ಎಂದು ಗುರುತಿಸಲು ಯಂತ್ರಗಳ ಅವಶ್ಯಕತೆ ಇರುವುದಿಲ್ಲ. ದೂರು ನೀಡುವುದಕ್ಕೂ ಮೊದಲು ಅಸಲಿ ಮತ್ತು ನಕಲಿ ಉತ್ಪನ್ನಗಳನ್ನು ತಾಳೆ ಮಾಡಿ ನೋಡಲಾಗಿತ್ತು.

ಅಸಲಿ ಉತ್ಪನ್ನ ಮತ್ತು ನಕಲಿ ಉತ್ಪನ್ನಗಳನ್ನು ಗುರುತಿಸಿ ಪ್ರಮಾಣ ಪತ್ರವನ್ನು ನೀಡಿರುತ್ತೇವೆ. ವಶಪಡಿಸಿಕೊಂಡಿದ್ದ ಬಾಕ್ಸ್‌ಗಳ ಮೇಲೆ ಕ್ರಮ ಸಂಖ್ಯೆಗಳನ್ನು ಹಾಕಲಾಗಿತ್ತು. ನನ್ನ ಹೇಳಿಕೆಯಲ್ಲಿ ಯಾವ ಉತ್ಪನ್ನಗಳಿರುವ ಬಾಕ್ಸ್ ಮೇಲೆ ಯಾವ ಸಂಖ್ಯೆ ಬರಯಲಾಗಿದೆ ಎಂದು ಬರೆದಿರುವುದಿಲ್ಲ. ನನ್ನ

ಹೇಳಿಕೆಯಲ್ಲಿ ಇ.ಆರ್.ಡಿ ಕಂಪನಿಯ ಉತ್ಪನ್ನಗಳ ಸಿರಿಯಲ್ ಸಂಖ್ಯೆ ಯಾವ ರೀತಿ ಇರುತ್ತದೆ ಮತ್ತು ನಕಲಿ ಉತ್ಪನ್ನಗಳ ಮೇಲೆ ಇರುವ ಸಂಖ್ಯೆ ಎನು ಇರುತ್ತದೆ ಎಂದು ಬರೆಸಿರುವುದಿಲ್ಲ. ಹೇಳಿಕೆಯನ್ನು ಠಾಣೆಯಲ್ಲಿಯೇ ಬರೆದುಕೊಂಡಿರುತ್ತಾರೆ. ಸದರಿ ಹೇಳಿಕೆಯನ್ನು ಠಾಣಾ ಬರಹಗಾರರೇ ಬರೆದುಕೊಂಡಿರುತ್ತಾರೆ. ಮಲ್ಲೇಶಪ್ಪ ಹೇಳಿಕೆ ಬರೆದುಕೊಂಡಿರುತ್ತಾರೆ. ಯಾವ ಕಂಪ್ಯೂಟರ್ ನಲ್ಲಿ ಹೇಳಿಕೆ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಉತ್ಪನ್ನಗಳನ್ನು ಜಪ್ತು ಪಡಿಸಿಕೊಂಡಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿ ನಕಲಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿರಲಿಲ್ಲ, ಆತನ ಸಂಬಂಧಪಟ್ಟ ಕಂಪನಿಯಿಂದ ಉತ್ಪನ್ನಗಳನ್ನು ಖರೀದಿಸಿ ಮಾರಾಟ ಮಾಡುತ್ತಿದ್ದ ಅಂದರೆ ಸರಿಯಲ್ಲ.

ಪಂಚನಾಮೆಯಲ್ಲಿ ಎನೆಲ್ಲಾ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಕನ್ನಡ ಬರುವುದಿಲ್ಲ ಎಂದು ನುಡಿಯುತ್ತಾರೆ. ಪಂಚರು ಅಂಗಡಿಯಲ್ಲಿಯೇ ಇದ್ದರು. ಪಂಚರ ಹೆಸರುಗಳು ನನಗೆ ನೆನಪಿಲ್ಲ. ಪಂಚನಾಮೆಯನ್ನು ಟೈಪ್ ಮಾಡಿದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಟರಾಜ ಎಂಬ ಪೋಲಿಸ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕಂಪ್ಯುಟರ್ ನ ಕಂಪನಿ ಹೆಸರು ನನಗೆ ಗೊತ್ತಿಲ್ಲ. ಯಾವುದೇ ವಿಚಾರಗಳು ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.